ಓ ಎಸ್ ನಂಃ 138-17
ಡಿ ಡಬ್ಲ್ಯೂ ಃ 1

ದಿಃ 16-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ

25. ನಿಪಿ 1ರಲ್ಲಿ ತೋರಿಸಿದ 4 ಎಕರೆ 1ನೇ ತಾಕು ಜಮೀನಿನ ಯಾವ ದಿಕ್ಕಿಗೂ 2ನೇ ತಾಕು ಜಮೀನು ಬರುವುದಿಲ್ಲ ಎಂದರೆ ನಿಜ. ಬಿ ಷೆಡ್ಯೂಲ್ ಆಸ್ತಿ ನನ್ನ ಜಮೀನಿನ ದಕ್ಷಿಣಕ್ಕೆ ಬರುತ್ತದೆ ಎಂದರೆ ನಿಜ. ಬಿ ಷೆಡ್ಯೂಲ್ ಆಸ್ತಿ ನನ್ನ ಜಮೀನಾದ 4 ಎಕರೆ ಜಮೀನಿನ ದಕ್ಷಿಣಕ್ಕೆ ಬರುತ್ತದೆ. ಸಾಕ್ಷಿ ಮುಂದುವರೆದು ಬಿ ಷೆಡ್ಯೂಲ್ ಆಸ್ತಿ ಎಂಬುದು ದಾಖಲೆಗಳಲ್ಲಿ ಇರುವುದಿಲ್ಲ ಎಂದು ಹೇಳುತ್ತಾರೆ. ಬಿ ಷೆಡ್ಯೂಲ್ ಆಸ್ತಿ ಆದ ಮೇಲೆ ಎ ಷೆಡ್ಯೂಲ್ ಆಸ್ತಿ ಬರುತ್ತದೆ ಎಂದರೆ ನಿಜ. ವಾದಿಯ ಜಮೀನಿನ ಉತ್ತರಕ್ಕಿರುವ ಜಮೀನಿನ ವಿಸ್ತೀರ್ಣ 5 ಎಕರೆ ಇರುತ್ತದೆ, ಸಾಕ್ಷಿ ಮುಂದುವರೆದು ಉತ್ತರಕ್ಕೆ ಎಷ್ಟು ಎಕರೆ ಜಮೀನು ಇರುತ್ತದೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಖರೀದಿ ಮಾಡಿದ 1ನೇ ತಾಕಿನ ಜಮೀನಿನ ಪಶ್ಚಿಮಕ್ಕೆ ಜಯಚಂದ್ರರವರ ಜಮೀನು ಇದೆ, ಪೂರ್ವಕ್ಕೆ ಮಹಾವೀರ್ ಜೈನ್ ರವರ ಜಮೀನು ಇದೆ, ಉತ್ತರಕ್ಕೆ ವಿಶ್ವನಾಥ್ ರವರ ಜಮೀನು ಇದೆ. ಮೇಲೆ ಹೇಳಿದ ಜಮೀನಿನ ಚಕ್ಕುಬಂದಿಯನ್ನು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ ತಾವು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ 1ನೇ ತಾಕಿನ ಜಮೀನಿನ ಬಗ್ಗೆ ನಾನು ಹೇಳಿದ ಚಕ್ಕುಬಂದಿಯ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ನಾನು ಹೇಳುವ ದಾಖಲೆ ಪಹಣಿಯಾಗಿರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಪಹಣಿಯನ್ನು ತೋರಿಸಲಾಗಿ ಅದರಲ್ಲಿ 1ನೇ ತಾಕಿನ ಜಮೀನಿನ ಚಕ್ಕುಬಂದಿಯ ಬಗ್ಗೆ ನಮೂದು ಇಲ್ಲ ಎಂದು ಹೇಳುತ್ತಾರೆ. ನಿಡಿ 1ರಲ್ಲಿ ತೋರಿಸಿದ ಜಮೀನಿನ ಚಕ್ಕುಬಂದಿ ನಾನು ಹೇಳುವ ಚಕ್ಕುಬಂದಿಗೆ ತಾಳೆಯಾಗುವುದಿಲ್ಲ. ನಿಡಿ 1ರ ಆಸ್ತಿಯನ್ನು ಹೊರತುಪಡಿಸಿ ನಾನು ಬೇರೆ ಆಸ್ತಿಯನ್ನು ವಿಶ್ವನಾಥ್ ರವರಿಂದ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದ ಆಸ್ತಿ ನಾನು ಖರೀದಿ ಮಾಡುವ ಮೊದಲೇ ಪೋಡಿಯಾಗಿತ್ತು ಮತ್ತು ಹದ್ದುಬಸ್ತು ಆಗಿತ್ತು. ಸರೋಜಮ್ಮರವರಿಂದ ನಾನು ಖರೀದಿ ಮಾಡಿದ ಆಸ್ತಿಯ ಪಶ್ಚಿಮಕ್ಕೆ ನಾನು ವಿಶ್ವನಾಥ್ ರವರಿಂದ ಖರೀದಿ ಮಾಡಿದ ಆಸ್ತಿ ಬರುತ್ತದೆ ಅದು ಇನ್‌ಟ್ಯಾಕ್ಟ್ ಇರುತ್ತದೆ. ನಿಡಿ 1ರ ಖರೀದಿ ಜಮೀನನ್ನು ನಾನು ಖಾಸಗಿಯವರ ಕಡೆಯಿಂದ ಸರ್ವೆ ಮಾಡಿಸಿದ್ದು ಸರ್ಕಾರಿ ಸರ್ವೆಯರ್ ಮೂಲಕ ಸರ್ವೆಯಾಗಲೀ ಅಥವಾ ಹದ್ದುಬಸ್ತಾಗಲಿ ಮಾಡಿಸಿರುವುದಿಲ್ಲ. ವಾದಿ ತಮ್ಮ ಜಮೀನನ್ನು ಸರ್ವೆ ಮಾಡಿಸಿರುತ್ತಾರೆ ಆದರೆ ನನಗೆ ಗೊತ್ತಾಗದ ಹಾಗೆ ಸರ್ವೆ ಮಾಡಿಸಿರುತ್ತಾರೆ. ವಾದಿ ಸರ್ವೆ ಮಾಡಿಸಿದ್ದನ್ನು

ನಾನು ಪ್ರಶ್ನೆ ಮಾಡಿರುತ್ತೇನೆ. ವಾದಿಯ ಜಮೀನನ್ನು ಎ ಡಿ ಎಲ್ ಆರ್ ರವರು ಸರ್ವೆ ಮಾಡಲು ಬಂದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ಸರ್ವೆಯರ್ ರವರು ಉತ್ತರ ಪೂರ್ವದಿಕ್ಕಿನ ಹದ್ದುಬಸ್ತು ಮಾಡಲು ಬಂದಿದ್ದರು ಎಂದರೆ ನಿಜ. ಆಗ ವಾದಿ ಪೂರ್ವ ಉತ್ತರದ ಜಮೀನನ್ನು ಬಿಟ್ಟು ಹದ್ದುಬಸ್ತ್ ಮಾಡಿರುವ ಬಗ್ಗೆ ಸರ್ವೆಯರ್ ರವರಿಗೆ ಪ್ರಶ್ನೆ ಮಾಡಿದ್ದರು ಎಂದರೆ ನಿಜ. ಸಾಕ್ಷಿ ಮುಂದುವರೆದು ನಾವು ಕೂಡ ತಕರಾರು ಮಾಡಿದ್ದೆವು ಎಂದು ಹೇಳುತ್ತಾರೆ. ಸದರಿ ಉತ್ತರ ಪೂರ್ವ ದಿಕ್ಕಿಗೆ ಬರುವ ಜಮೀನೇ ಬಿ ಷೆಡ್ಯೂಲ್ ಆಸ್ತಿಯಾಗಿರುತ್ತದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ಅದು ನನ್ನ ಜಮೀನು ಆಗಿರುತ್ತದೆ ಎಂದು ಹೇಳುತ್ತಾರೆ. ಸರ್ವೆಯರ್ ರವರು ಹದ್ದುಬಸ್ತನ್ನು ಮಾಡುವಾಗ ಮಹಜರಿನಲ್ಲಿ ಉತ್ತರ ಪೂರ್ವ ದಿಕ್ಕಿನ ಜಮೀನನ್ನು ಬಿಟ್ಟು ಹದ್ದುಬಸ್ತನ್ನು ಮಾಡಬಹುದು ಎಂದು ವಾದಿ ಅನುಮತಿ ಕೊಟ್ಟಿರುತ್ತಾರೆಂದು ತಮ್ಮ ಮಹಜರಿನಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿದ್ದರು ಎಂದರೆ ನಿಜ. ಆಗ ವಾದಿಗಳು ಸರ್ವೆಯರ್ ರವರ ಮೇಲಾಧಿಕಾರಿಗಳಿಗೆ, ಸರ್ವೆಯರ್ ಸರಿಯಾಗಿ ಸರ್ವೆ ಮಾಡಿರುವುದಿಲ್ಲವೆಂದು ದೂರನ್ನು ಕೊಟ್ಟಿದ್ದರು. ನಂತರ ಮೇಲಾಧಿಕಾರಿಗಳು ಸರ್ವೆಯರ್ ರವರು ಉದ್ದೇಶಪೂರ್ವಕವಾಗಿ ವಾದಿ ಪೂರ್ವ ಉತ್ತರ ದಿಕ್ಕಿನ ಜಮೀನಿಗೆ ಹದ್ದುಬಸ್ತು ಮಾಡಲು ಅನುಮತಿ ಕೊಟ್ಟಿದ್ದನ್ನು ಸೇರಿಸಿದ್ದಾಗಿ ತಿಳಿದುಬಂದ ನಂತರ ಸದರಿ ಸರ್ವೆಯರ್ ರವರನ್ನು ಮೇಲಾಧಿಕಾರಿಗಳು ಕೆಲಸದಿಂದ ವಜಾ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಆದರೆ ಪೋಡಿಯನ್ನು ರದ್ದುಮಾಡಿದ್ದರು ಎಂದು ಹೇಳುತ್ತಾರೆ.

26. ಸಾಕ್ಷಿಗೆ ಈಗ ದಿನಾಂಕಃ 12-03-2019 ರ ದಾಖಲೆಯನ್ನು ಓದಿ ಹೇಳಲಾಗಿ ಅದರಲ್ಲಿರುವ ವಿಷಯವನ್ನು ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಪಿ 32 ಎಂದು ಗುರುತಿಸಲಾಯಿತು. ಬಿ ಷೆಡ್ಯೂಲ್ ಆಸ್ತಿಯಲ್ಲಿ ಪಂಪ್ ಸೆಟ್ ಮತ್ತು ಪಂಪ್ ಹೌಸ್ ಮನೆ ಇರುತ್ತದೆ ಎಂದರೆ ನಿಜ. ನಾನು 2016 ರಲ್ಲಿ ಪಂಪ್ ಹೌಸ್ ಗೆ ಪರವಾನಿಗೆ ಪಡೆದಿದ್ದೇನೆ. 2014 ರಲ್ಲಿ ನಾನು 20 ಗುಂಟೆ ಜಮೀನಿನಲ್ಲಿ ಬೋರ್ ನ್ನು ಹಾಕಿಸಿ 6 ತಿಂಗಳ ನಂತರ ಮನೆಯನ್ನು ಕಟ್ಟಿಸಿರುತ್ತೇನೆ, ಸಾಕ್ಷಿ ಮುಂದುವರೆದು ಸ್ಥಳದಲ್ಲಿ 20 ಗುಂಟೆ ಜಮೀನು ಇರುವುದಿಲ್ಲ ಇರುವುದೇ 4 ಎಕರೆ ಜಮೀನು ಎಂದು ಹೇಳುತ್ತಾರೆ. ಸ್ಥಳದಲ್ಲಿ 20 ಗುಂಟೆ ಜಮೀನು ಇರುವುದಿಲ್ಲ 4 ಎಕರೆ ಜಮೀನು ಇರುತ್ತದೆ ಎಂದು ತೋರಿಸಲು ನಾನು ಖಾಸಗಿಯವರಿಂದ ಸರ್ವೆ ಮಾಡಿಸಿದ್ದು ಸರ್ಕಾರಿ ಇಲಾಖೆಯಿಂದ ಸರ್ವೆ ಮಾಡಿಸಿರುವುದಿಲ್ಲ. ಸದರಿ ಸರ್ವೆ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೋ ಇಲ್ಲವೋ ನೆನಪಿಲ್ಲ. ಸಾಕ್ಷಿಗೆ ಈಗ ತಾವು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ ಮೇಲೆ ಹೇಳಿದ ಸರ್ವೆ ದಾಖಲೆ ಇರುವುದಿಲ್ಲ ಎಂದು ಹೇಳುತ್ತಾರೆ.

27. ವಾದಿ ಬೆಂಗಳೂರಿನಲ್ಲಿ ವಾಸಮಾಡುತ್ತಾರೆ ಎಂದರೆ ನಿಜ. ನಾನು ಸಹ ಬೆಂಗಳೂರಿನಲ್ಲಿ

ವಾಸಮಾಡುತ್ತಿದ್ದು ನಾನು ಖರೀದಿ ಮಾಡಿದ ಜಮೀನಿನ ಪಕ್ಕ ಫಾರಂ ಹೌಸನ್ನು ಕಟ್ಟಿಸಿರುತ್ತೇನೆ ನಾನು ಸದರಿ ಫಾರಂ ಹೌಸ್ ಗೆ ಹೋಗಿ ಬಂದು ಮಾಡುತ್ತೇನೆ. ವಾದಿಗಳ ಅನುಪಸ್ಥಿತಿಯಲ್ಲಿ ನಾನು ಬಿ ಷೆಡ್ಯೂಲ್ ಆಸ್ತಿಯಲ್ಲಿ ಬೋರ್ ವೆಲ್ ನ್ನು ಹಾಕಿಸಿ ಪಂಪ್ ಹೌಸ್ ನ್ನು ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡುವ ಮೊದಲು ವಾದಿ ನಾನು ಪಂಪ್ ಸೆಟ್ ಹಾಕಿರುವ ಬಗ್ಗೆ ಪ್ರಶ್ನೆ ಮಾಡಿದ್ದರು ಮತ್ತು ನನ್ನನ್ನು ಕೇಳಿದ್ದರು ಎಂದರೆ ಸರಿಯಲ್ಲ. ನಂತರ ದಾವೆ ಹೂಡಿರುತ್ತಾರೆ ಎಂದರೆ **2017** ರಲ್ಲಿ ದಾವೆ ಹೂಡಿದ್ದರು ಎಂದು ಹೇಳುತ್ತಾರೆ. ವಾದಿಯ ಜಮೀನಿನಲ್ಲಿ ಯಾವುದೇ ಕಟ್ಟಡಗಳನ್ನು ಕಟ್ಟಬಾರದೆಂದು ನ್ಯಾಯಾಲಯದಿಂದ ನಿರ್ಬಂಧಕಾಜ್ಞೆ ಆದೇಶ ಆಗಿತ್ತು ಎಂದರೆ **2017** ರಲ್ಲಿ ಆಗಿತ್ತು ಎಂದು ಹೇಳುತ್ತಾರೆ. ಈಗಲೂ ಸಹ ಮೇಲೆ ಹೇಳಿದ ನಿರ್ಬಂಧಕಾಜ್ಞೆ ಆದೇಶ ಇರುತ್ತದೆ ಎಂದರೆ ನಿಜ. ನಿರ್ಬಂಧಕಾಜ್ಞೆ ಆದೇಶವನ್ನು ಉಲ್ಲಂಘನೆ ಮಾಡಿ ನಾನು ಕಟ್ಟಡ ನಿರ್ಮಾಣ ಮಾಡಿದ್ದರಿಂದ ವಾದಿ ಪೋಲಿಸ್ ಠಾಣೆಯಲ್ಲಿ ದೂರನ್ನು ಮಾಡಿದ್ದರು ಎಂದರೆ ನಿಜ. ನಾನು ಪೋಲಿಸ್ ಠಾಣೆಯಲ್ಲಿ ಜಮೀನಿನಲ್ಲಿ ಕಟ್ಟಡ ಕಟ್ಟುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಟ್ಟಿದ್ದೆ ಎಂದರೆ ಸರಿಯಲ್ಲ, ನಾನು ನನ್ನ ಜಾಗದಲ್ಲಿ ಕಟ್ಟಡಕಟ್ಟುವುದಾಗಿ ಹೇಳಿದ್ದೆ, ನಂತರ ವಾದಿ ಸ್ಟೇ ಆದೇಶವನ್ನು ತಂದಿದ್ದರು ಎಂದು ಹೇಳುತ್ತಾರೆ. ನಾನು ನನ್ನ ಜಾಗದಲ್ಲಿ ಕಟ್ಟಡ ಕಟ್ಟುತ್ತಿದ್ದೇನೆ ಎಂದು ಹೇಳಿ ಈ ನ್ಯಾಯಾಲಯದ ನಿರ್ಬಂದಕಾಜ್ಞೆ ಆದೇಶವನ್ನು ತೆರವುಗೊಳಿಸಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ನಾನು ರಾಮನಗರ ನ್ಯಾಯಾಲಯದಿಂದ ಸ್ಟೇ ಆದೇಶವನ್ನು ಪಡೆದಿದ್ದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ತಾವು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ ರಾಮನಗರ ನ್ಯಾಯಾಲಯದಿಂದ ಪಡೆದ ಸ್ಟೇ ಆದೇಶದ ಪ್ರತಿ ಇರುವುದಿಲ್ಲ ಎಂದು ಹೇಳುತ್ತಾರೆ.

**28.** ವಾದಿ ಮತ್ತು ನಾನು ಸಲ್ಲಿಸಿದ ಫೋಟೋಗಳು ದಾವಾ ಆಸ್ತಿಗೆ ಸಂಬಂದಿಸಿರುತ್ತದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ನನ್ನ ಆಸ್ತಿ ಆಗಿರುತ್ತದೆ ಎಂದು ಹೇಳುತ್ತಾರೆ. ನಿಪಿ **21** ರಲ್ಲಿ ಪಕ್ಷಗಾರರ ಹೆಸರಿನಲ್ಲಿ ತೋರಿಸಿದ ಉರ್ಮಿಳಾ ಎಂದರೆ ನಾನೇ ಆಗಿರುತ್ತೇನೆ ಸದರಿ ಆದೇಶ ದಿನಾಂಕ **11-04-2016** ರಂದು ಆಗಿರುತ್ತದೆ ಎಂದರೆ ನಿಜ. ನಿಪಿ **21** ರಂತೆ ನಾನು **4** ಎಕರೆ ಜಮೀನಿಗಿಂತ ಹೆಚ್ಚಿಗೆ ಜಮೀನು ಸ್ವಾಧೀನತೆ ಹೊಂದಿರುತ್ತೇನೆಂದು ಆದೇಶದಲ್ಲಿರುತ್ತದೆ ಎಂದರೆ ನಿಜ. ನಿಪಿ **21** ರಲ್ಲಿ ಆದೇಶದಲ್ಲಿರುವ ಹೆಚ್ಚಿಗೆ ಜಮೀನಿನ ಸ್ವಾಧೀನತೆಯನ್ನು ಹೊಂದಿದ್ದಾರೆ ಎಂದು ಹೇಳಿದ್ದು ಬಿ ಷೆಡ್ಯೂಲ್ ಆಸ್ತಿಯಾಗಿರುತ್ತದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ನಾನು ಹೆಚ್ಚಿಗೆ ಜಮೀನಿನ ಸ್ವಾಧೀನತೆ ಹೊಂದಿಲ್ಲ ಎಂದು ಹೇಳುತ್ತಾರೆ. ನಾನು **4** ಎಕರೆ ಜಮೀನಿನ ಸರ್ವೆಯನ್ನು ಖಾಸಗಿ ಸರ್ವೆಯರ್ ರವರಿಂದ ಮಾಡಿಸಿರುತ್ತೇನೆ. ನಾನು **4** ಎಕರೆ ಜಮೀನಿನ ಸ್ವಾಧೀನತೆ ಹೊಂದಿದ್ದು ಹೆಚ್ಚಿಗೆ ಜಮೀನಿನ ಸ್ವಾಧೀನತೆ ಹೊಂದಿಲ್ಲವೆಂದು ಸರ್ವೆಯಾಗಲಿ, ಹದ್ದುಬಸ್ತಾಗಲೀ ಮಾಡಿಸಿಲ್ಲ.

**29.** ನಿಪಿ21 ರ ಆದೇಶದ ವಿರುದ್ದ ನಾನು ಡಿ ಸಿ ಯವರ ನ್ಯಾಯಾಲಯದಲ್ಲಿ ಮೇಲ್ಮನವಿ ನಂ **33/2018-19** ನ್ನು ಸಲ್ಲಿಸಿದ್ದೆ ಎಂದರೆ ನಿಜ. ನಾನು ಡಿ ಸಿ ಯವರ ನ್ಯಾಯಾಲಯದಲ್ಲಿ ಸಲ್ಲಿಸಿದ ಮೇಲ್ಮನವಿಯಲ್ಲಿ ನಾನು ಈ ದಾವೆಯ ವಾದಿಯನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ನಿಜ. ನಂತರ ವಾದಿಯೇ ಸದರಿ ಮೇಲ್ಮನವಿಯಲ್ಲಿ ತಮ್ಮನ್ನು ಸೇರಿಸಿಕೊಳ್ಳಬೇಕೆಂದು ಅರ್ಜಿ ಸಲ್ಲಿಸಿ ಬಂದಿರುತ್ತಾರೆ ಎಂದರೆ ನಿಜ. ಈ ದಾವೆಯ ವಾದಿಯೇ ಮೇಲ್ಮನವಿಯಲ್ಲಿ **10** ನೇ ಎದುರುದಾರರು ಆಗಿರುತ್ತಾರೆ ಎಂದರೆ ನಿಜ. ಸದರಿ ಮೇಲ್ಮನವಿಯಲ್ಲಿ ನಾನು ಮತ್ತು ಎದುರುದಾರರು ಸಲ್ಲಿಸಿದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿತ್ತು ಎಂದರೆ ನಿಜ. ನಾನು ಸಲ್ಲಿಸಿದ ಮೇಲ್ಮನವಿ ದಿನಾಂಕಃ **09-01-2019** ರಂದು ಮುಕ್ತಾಯವಾಗಿತ್ತು ಎಂದರೆ ನಿಜ. ಸಾಕ್ಷಿಗೆ ಈಗ ದಿನಾಂಕಃ **09-01-2019** ರ ಆದೇಶದ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ **33** ಎಂದು ಗುರುತಿಸಲಾಯಿತು. ನಿಪಿ **33** ರಂತೆ ನನ್ನ ಮೇಲ್ಮನವಿ ವಜಾ ಆಗಿ ಸ್ಟೇ ಆದೇಶ ಕೂಡ ರದ್ದು ಆಗಿತ್ತು ಎಂದರೆ ನಿಜ. ನಿಪಿ **33** ರ ಆದೇಶವನ್ನು ನಾನು ಹಾಗೂ ಯಾರು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ನಿಜ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**